ಅವಕಾಶವನ್ನು ಮಾಡಿಕೊಡುತ್ತೀರಿ? ಇದರ ಬಗ್ಗೆ ಯಾವಾಗ ಬದಲಾವಣೆಯನ್ನು ತರುತ್ತೀರೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್: ಸನ್ಮಾನ್ಯ ಅಧ್ಯಕ್ಷರೆ, ಮೈಸೂರು ನಗರದಲ್ಲಿ 32 ಕಿ.ಮೀ ರಸ್ತೆಯನ್ನು ದುರಸ್ತಿ ಮಾಡುವಂಥದ್ದು ನಮ್ಮ ಲೋಕೋಪಯೋಗಿ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ನಾನು ಮೊನ್ನೆ ದಿನ ಮೈಸೂರು ನಗರಕ್ಕೆ ಹೋಗಿದ್ದಾಗ ವೆಸ್ಟರ್ನ್‌ಗೇಟ್‌ನಲ್ಲಿ, ಪ್ರಿನ್ಸೆಸ್ ಸರ್ಕಲ್‌ನಲ್ಲಿ ಆಯುರ್ವೇದಿಕ್ ಆಸ್ಪತ್ರೆ ಕಾಲೇಜು ರಸ್ತೆ ರೈಲ್ವೆಸ್ಟೇಷನ್ ರಸ್ತೆ ಅಲ್ಲಿ ಕೂಡ ಈಗಾಗಲೇ ನಾವು ಹಣವನ್ನು ಖರ್ಚು ಮಾಡಿ ಕೆಲಸ ಮಾಡುವಂಥದ್ದನ್ನು ಮಾಡಿದ್ದೇವೆ; ಇದು ತಮಗೂ ಸಹ ಗೊತ್ತಿರಬಹುದು, ಏಕೆಂದರೆ I have given a strict instruciton to my officers. ಎಲ್ಲೆಲ್ಲಿ ಪಿಡಬ್ಲ್ಯೂಡಿ ರಸ್ತೆಗಳು ಇದೆ, ಅದನ್ನು ಚೆನ್ನಾಗಿ ದುರಸ್ತಿ ಮಾಡಬೇಕೆಂದು ಹೇಳಿದ್ದೇನೆ. ಇನ್ನು ಎರಡನೆಯದಾಗಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಅದರಿಂದ ಆಗತಕ್ಕಂತಹ ರಸ್ತೆಗಳು ಕಾರ್ಪೊರೇಷನ್ ಏರಿಯಾದಲ್ಲಿ ಕೂಡ ತಾವು ಹೇಳಿದಹಾಗೆ 11 ಕಿ.ಮೀ. ರಸ್ತೆಯನ್ನು ಅವರು ತೆಗೆದುಕೊಂಡಿದ್ದಾರೆ. ಇದನ್ನು ನಾವು ಕೂಡ ಹಸ್ತಾಂತರ ಮಾಡುತ್ತಾ ಇದ್ದೇವೆ. ಈಗ ಆಗತಕ್ಕದ್ದು ಏನೆಂದರೆ ಮೂಡಾದಲ್ಲಿ ಬರುವಂಹ ರಸ್ತೆಗಳು, ಕಾರ್ಪೊರೇಷನ್‌ನಲ್ಲಿ ಬರತಕ್ಕಂತಹ ರಸ್ತೆಗಳು, ಪಿಡಬ್ಲ್ಯೂಡಿ ಇವೆಲ್ಲ ಒಂದೇ ಏಜೆನ್ಸಿಯಾದರೆ ಸರಿಯಾಗಿ ಆಗಬಹುದು ಎಂದು ನಮ್ಮ ಅನಿಸಿಕೆಯಾಗಿದೆ. ಇದರ ಬಗ್ಗೆ ಸರ್ಕಾರವು ಪರಿಶೀಲಿಸುತ್ತದೆ, ಆದರೂ ಕೂಡ ಮೈಸೂರು ನಗರಕ್ಕೆ ಇವತ್ತಿನದಿವಸ ಹೆಚ್ಚಿನ ರೀತಿಯಲ್ಲಿ ಈಗ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಕೆಲಸಕಾರ್ಯಗಳನ್ನು ಮಾಡಿಸುತ್ತಿದ್ದೇವೆ, ಈಗಾಗಲೇ ಆ್ಯಕ್ಷನ್ ಪ್ಲಾನ್‌ನ್ನು ಪ್ರಿಪೇರ್ ಮಾಡಿದ್ದೇವೆ. ತಾವು ಕೂಡ ಆ ಭಾಗದ ಶಾಸಕರಾಗಿದ್ದೀರಿ, ನಾವು ಅಲ್ಲಿಯೂ ಕೂಡ ಕೆಲಸವನ್ನು ಸ್ಟಾರ್ಟ್ ಮಾಡಿದ್ದೇವೆ.

ಬೆಂಗಳೂರು ನಗರದಲ್ಲಿ ತಮಿಳುನಾಡಿನ ಹಾಲು ಮಾರಾಟ ಮಾಡುವುದನ್ನು ತಡೆಗಟ್ಟುವ ಬಗ್ಗೆ

284(2723)

ಶ್ರೀ ಸುಬ್ಬಾರೆಡ್ಡಿ ಕೆ.ಎನ್(ಬಸವನ ಗುಡಿ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಹಲವಾರು ಬಡಾವಣೆಗಳಲ್ಲಿ ಪ್ರತಿನಿತ್ಯ ಬೆಳಗಿನ ಜಾವ 3.00 ಗಂಟೆಗೆ ನೆರೆರಾಜ್ಯ ತಮಿಳುನಾಡಿನಿಂದ 1 ಲೀಟರ್‌ಗೆ 3-00 ರೂ.ನಂತೆ ಹಾಲನ್ನು ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ 3.00 ರೂ.ಗೆ 1 ಲೀಟರ್ ಹಾಲನ್ನು ಈಗಿನ ಪರಿಸ್ಥಿತಿಯಲ್ಲಿ ಮಾರಾಟ ಮಾಡಲು ಸಾಧ್ಯವೆ?

ಇ) ಇಂತಹ ಮಾರಾಟ ಮಾಡುತ್ತಿರುವ ಹಾಲು ಶುದ್ಧವಾದ ಹಾಲು ಆಗಲು ಸಾಧ್ಯವೆ?

ಈ) ಇಂತಹ ಹಾಲನ್ನು ಬೆಂಗಳೂರು ನಗರದ ಹೋಟೆಲ್‌ಗಳಿಗೆ ಸರಬರಾಜು ಮಾಡುತ್ತಿದ್ದು ಇದರ ದುಷ್ಪರಿಣಾಮ ಸಾರ್ವಜನಿಕರ ಮೇಲೆ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಈ ಹಾಲು ಮಾರಾಟವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು):

ಅ) ಲೀಟರ್‌ಗೆ ರೂ.3-00 ರಂತೆ ಹಾಲನ್ನು ಮಾರುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಆದರೆ, ಲೀಟರ್‌ಗೆ ರೂ.6-00 ರಂತೆ ಮಾರಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಕೊಬ್ಬಿನಂಶ ಹೊರತು ಪಡಿಸಿ ಉಳಿದ ಎಲ್ಲಾ ಅಂಶಗಳು ಹಾಲಿನಲ್ಲಿ ಇವೆ.

ಈ) ಇದು ಯಾವುದೇ ದುಷ್ಪರಿಣಾಮ ಉಂಟು ಮಾಡುವುದಿಲ್ಲ.

ಉ) ಮೇಲ್ಕಾಣಿಸಿದ ಹಿನ್ನೆಲೆಯಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ತಮಿಳುನಾಡಿನಿಂದ ಬೆಂಗಳೂರಿಗೆ ಎಷ್ಟು ಸಾವಿರ ಲೀಟರ್ ಹಾಲು ಬರುತ್ತಿದೆ? How much litres of milk that are being transported to Bangalore City?

ಶ್ರೀ ಎ.ಕೃಷ್ಣಪ್ಪ: ಅಲ್ಲಿಂದ ಬರುತ್ತಿರುವುದು ಸತ್ಯವಾಗಿದೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಇದರಲ್ಲಿ the milk in conformity with the Act i.e., prevention of Food Adulteration Act?

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಅದಕ್ಕೆ ಅಳತೆಗೋಲು ಇಲ್ಲವೆಂದ ಮೇಲೆ ನಾವು ಅಲ್ಲಿಗೆ ಹೋಗಿ ಕ್ವಾಲಿಟಿಯ ಮೇಲೆ ಚೆಕ್ ಮಾಡುವುದಕ್ಕೆ ಅವಕಾಶಗಳಿಲ್ಲ. ಆದರೆ ಮಾನ್ಯ ಸದಸ್ಯರು ಹಾಲಿನ ಗುಣಮಟ್ಟದ ಬಗ್ಗೆ ಎತ್ತಿರುವಂತಹ ವಿಚಾರದಲ್ಲಿ ಏನು

ಹೇಳಿದ್ದಾರೆಂದರೆ, ಅದನ್ನು ಕಾರ್ಪೊರೇಷನ್‌ಗೆ ಸಂಬಂಧಪಟ್ಟ ಹೆಲ್ತ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಮಾಡಬೇಕಾಗಿದೆ. ಅದನ್ನು ಅವರು ಮಾಡಿಲ್ಲ. Inter-state transportation of these articles. ಅದರ ಮೇಲೆ ನಾವಿನ್ನು ನಿಬಂಧನೆಗಳನ್ನು ಹಾಕಿಲ್ಲ ಈಗ ಮಾನ್ಯ ಸದಸ್ಯರು ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಅದಕ್ಕಾಗಿ ನೋಡ ಶನಿವಾರ ಇಡೀ ರಾಜ್ಯದಲ್ಲಿರುವಂತಹ ಎಲ್ಲಾ ಅಧಿಕಾರಿಗಳನ್ನು ಕರೆದು ಒಂದು ಸಭೆಯನ್ನು ಮಾಡಿದ್ದೇವೆ. ಆ ಸಭೆಯಲ್ಲಿ ಕೆಲವೊಂದು ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಯಾವ ರೀತಿಯಾಗಿ ಕಠಿಣವಾದ ಕ್ರಮವನ್ನು ಜಾರಿ ಮಾಡಿದರೆ ಸಾರ್ವಜನಿಕರ ಆರೋಗ್ಯದ ಮೇಲೆ ಆಗುವಂತಹ ದುಷ್ಪರಿಣಾಮವನ್ನು ತಪ್ಪಿಸಬಹುದೆಂದು ಹಲವು ಸರ್ಕಾರವು ದೀರ್ಘವಾಗಿ ಸಮಾಲೋಚನೆಯನ್ನು ಮಾಡಿದೆ. ಆ ರೀತಿಯಾದಂತಹ ಒಂದು ಹೊಸ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಕಾತುರವಾಗಿದೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಇದರಿಂದ ಯಾವುದೇ ದುಷ್ಪರಿಣಾಮ ಉಂಟಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಈಗ ಹಾಲು ಏನು ಬರುತ್ತಿದೆ ಅದಕ್ಕೆ 'ಈರೋಡ್ ಮಿಲ್ಕ್' ಎಂದು ಹೆಸರು ಇದೆ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಹಿಂದೆ ಜೆ.ಸಿ.ರಸ್ತೆಯಲ್ಲಿ ಭಾರತ್ ಟಾಕೀಸ್ ಎಂದು ಇತ್ತು ಅಲ್ಲಿಗೆ ಬೆಳಿಗ್ಗೆ 3 ಗಂಟೆಗೆ ಹಾಲು ಬಂದು ಇಳಿಯುತ್ತಿತ್ತು. ಅದು ಮನುಷ್ಯನ ದೇಹಕ್ಕೆ ಬಹಳ ದುಷ್ಪರಿಣಾಮವನ್ನು ಬೀರುವಂತಹ ಹಾಲು ಎಂದು ಇಡೀ ಬೆಂಗಳೂರಿಗೆ ಗೊತ್ತಿದೆ. ಪೈಡ್ರೋಜನ್ ಪೆರಾಕ್ಸೈಡ್‌ನಿಂದ ಹಿಡಿದು ಅನೇಕ ರೀತಿಯ ಕೆಮಿಕಲ್ಸ್‌ಗಳನ್ನು ಸೇರಿಸಿ ಆ ಹಾಲಿನ ಬಣ್ಣ ಬೆಳ್ಳಗಿರುವುದಕ್ಕೆ ಏನೇನೋ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ನಾನು ನಗರಪಾಲಿಕೆಯವರ ಗಮನಕ್ಕೆ ತಂದು, ಅಲ್ಲಿ ಟೆಸ್ಟ್ ಮಾಡಿಸಿ ಇದನ್ನು ರುಜುವಾತು ಸಹ ಮಾಡಿದ್ದೇನೆ. ಈಗ ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಕೂಡಲೆ ಈ 'ಈರೋಡ್ ಮಿಲ್ಕ್' ಏನು ಬರುತ್ತಿದೆ, ಅದು ಬೆಂಗಳೂರು ನಗರದ ನಾಗರೀಕರ ಆರೋಗ್ಯದ ಮೇಲೆ ಅಂದರೆ ವಿಶೇಷವಾಗಿ ಹೃದಯದ ಮೇಲೆ ದುಷ್ಪರಿಣಾಮವನ್ನು ಮಾಡುವಂತಹ ಹಾಲನ್ನು ಬೆಂಗಳೂರಿಗೆ ತರುವುದನ್ನು ನಿಲ್ಲಿಸುವುದಕ್ಕೆ ರಾಯಪಟ್ಟು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀಮತಿ ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಕಳಕಳಿ ಬಗ್ಗೆ ನಮ್ಮ ಜನಗಳ ಆರೋಗ್ಯದ ಬಗ್ಗೆ ನಮಗೂ ಸಹ ಅರಿವು ಉಂಟಾಗಿದೆ. ಆದರೆ ಒಂದು ವಿಚಾರವೆಂದರೆ, ಈ ಇಂಟರ್ ಸ್ಟೇಟ್ ಪಾಲಿಸಿಯ ವಿಚಾರದಲ್ಲಿ ಯಾವ ರೀತಿಯಾಗಿ ನಾವು ಕ್ರಮವನ್ನು ಕೈಗೊಳ್ಳಬೇಕು? ಅದು ತಮಗೆ ಗೊತ್ತಿರುವಂತಹ ವಿಷಯ. ನಮ್ಮ

ಪ್ರಾಡಕ್ಟ್ ಮಿಲ್ಕ್‌ನ್ನು ರಾ- ಮಿಲ್ಕ್‌ನ್ನು ನೇರವಾಗಿ ಮಿಲ್ಕ್ ಪೌಡರನ್ನು ಪಕ್ಕದ ರಾಜ್ಯಗಳಲ್ಲಿ ನಾವು ಮಾರಾಟ ಮಾಡಿಸಿದ್ದೇವೆ. ಅಂದರೆ ತಮಿಳುನಾಡು, ಆಂಧ್ರ, ಗೋವಾ, ಕೇರಳ ರಾಜ್ಯಗಳಲ್ಲಿ ಮಾರಾಟವನ್ನು ಮಾಡಿಸಿದ್ದೇವೆ. ನಾವು ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಂಡಾಗ ರೆಫರ್‌ಕೇಷನ್ಸ್ ಏನು ಎಂದು ಹೇಳಿ, ನಾವು ಸ್ಟೇಟ್-ಟು-ಸ್ಟೇಟ್ ಅನಲೈಸ್ ಮಾಡಬೇಕಾಗಿದೆ. ಇದರ ಜೊತೆಜೊತೆಯಲ್ಲೇ ನಮ್ಮ ಅಧಿಕಾರಿಗಳು ಅದನ್ನು ನಿಯಂತ್ರಣ ಮಾಡುವುದಕ್ಕೆ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ನಾವು ಈಗಾಗಲೇ ದೀರ್ಘವಾದ ಸಭೆಯನ್ನು ಮಾಡಿದ್ದೇವೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಸಚಿವರು ಇಂಟರ್‌ಸ್ಟೇಟ್ ವಿಚಾರದ ನೆಪದಲ್ಲಿ ಆ ವಿಷವನ್ನು ಇಲ್ಲಿ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಬೇಕೇ? ವಿಷವನ್ನು ಮಾರಾಟ ಮಾಡುವುದಕ್ಕೆ ಏಕೆ ಅವಕಾಶವನ್ನು ಕೊಡುತ್ತೀರಾ?

ಶ್ರೀ ಎ.ಕೃಷ್ಣಪ್ಪ: ನಾವು ಲ್ಯಾಬ್ ರಿಪೋರ್ಟ್ ತೆಗೆದುಕೊಂಡಿದ್ದೇವೆ. ತಮಗೆ ತೋಚಿದ್ದನ್ನು ಅದು ವಿಷವೆಂದು ತಾವು ಹೇಳಿದ್ದೀರಿ. ಅದರ ಬಗ್ಗೆ ರಿಪೋರ್ಟ್ ಇಲ್ಲಿ ಇದೆ.

ಶ್ರೀ ಎಸ್.ಸುರೇಶ್‌ಕುಮಾರ್: I take strong objection. ತಾವು ನನಗೆ ತೋಚಿದ್ದನ್ನು ಹೇಳುತ್ತಿದ್ದಾರೆಂದು ಹೇಳುತ್ತೀರಿ, ಮಾನ್ಯ ಸಚಿವರು 3-4 ತಿಂಗಳಿನಿಂದ ಸಚಿವರಾಗಿರಬಹುದು, ಬೆಂಗಳೂರಿನ ಬಗ್ಗೆ ಆ ಈರೋಡ್ ಮಿಲ್ಕ್‌ನ ಬಗ್ಗೆ ನನಗೆ ಗೊತ್ತಿರುವಷ್ಟು ಮಾಹಿತಿ ಮಾನ್ಯ ಸಚಿವರಿಗೆ ಗೊತ್ತಿಲ್ಲ. ಅದಕ್ಕೋಸ್ಕರವಾಗಿ ನಾನು ತಮ್ಮ ವಿವೇಚನೆಗೆ ಅದನ್ನು ತರುತ್ತಿದ್ದೇನೆ. ನಗರಪಾಲಿಕೆಯ ಆರೋಗ್ಯ ಮತ್ತು ಫುಡ್ ಇಲಾಖೆಯವರು ಅದನ್ನು ಟೆಸ್ಟ್ ಮಾಡಬೇಕೆಂದು ಹೇಳುತ್ತೀರಿ, ನಾವು ಅದನ್ನು ಮಾಡಿಸಿದ ಮೇಲೆಯೇ ಹೇಳುತ್ತಿರುವುದು, ಈ ರೀತಿಯಾಗಿ ಹಾಲಿನ ಹೆಸರಿನಲ್ಲಿ ಬರುತ್ತಿರುವ ವಿಷ ಅದು, ಹೈಡ್ರೋಜನ್ ಪೆರಾಕ್ಸೈಡ್ ಎಂದು ನಾನು ಸ್ಪೆಸಿಫಿಕ್ಕಾಗಿ ಹೇಳುತ್ತಿದ್ದೇನೆ. ಅಂತಹ ಒಂದು ಕೆಮಿಕಲ್ಸ್‌ನ್ನು ಹಾಲಿಗೆ ಸೇರಿಸಿ, ಆ ಹಾಲನ್ನು ಬಿಳಿ ಬಣ್ಣ ಮಾಡುತ್ತಿರುವುದು ಎಂದು ನಾನು ಆ ಮಾಹಿತಿಯನ್ನು ತಮ್ಮ ಗಮನಕ್ಕೆ ತಂದರೂ ಕೂಡ ತಾವು ನನಗೆ ತೋಚುತ್ತಿರುವುದನ್ನು ಹೇಳುತ್ತೀರಿ ಎಂದರೆ ಅದು ಹೇಗೆ?

ಶ್ರೀ ಎ.ಕೃಷ್ಣಪ್ಪ: ಈಗ ತಾನೇ ಆ ಬಗ್ಗೆ ರಿಪೋರ್ಟ್‌ನ್ನು ನಾವು ತೆಗೆದುಕೊಂಡಿದ್ದೇವೆ. ಅಫಿಷಿಯಲ್ ರಿಪೋರ್ಟ್‌ನ್ನು ಲ್ಯಾಬ್‌ನಲ್ಲಿ ಮಾಡಿಸಿ ಇದರಲ್ಲಿ ಏನೇನು ಡಿಸ್ ಅಡ್ವಾನ್‌ಟೇಜ್ ಇದೆ, ಹೆಲ್ತ್ ಮೇಲೆ ಏನು ದುಷ್ಪರಿಣಾಮ ಬೀರುತ್ತದೆಂದು ರಿಪೋರ್ಟ್‌ನ್ನು ತರಿಸಿಕೊಂಡಿದ್ದೇವೆ. ಶನಿವಾರದ ದಿವಸ ಇದರ ಬಗ್ಗೆ ದೀರ್ಘವಾದ ಸಭೆಯನ್ನು ನಡೆಸಿದ್ದೇವೆ. ಆ ಬಗ್ಗೆ ನೇರವಾಗಿ ಹೇಳುವುದು ಬೇಡ; ಇದರ ಬಗ್ಗೆ ಕ್ರಮವೆನ್ನು ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ತಾವು ಹೇಳಿದ್ದೀರಿ, ಅದಕ್ಕೆ ನಾವು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಅರಗಜ್ಞಾನೇಂದ್ರ: ಇದರಲ್ಲಿ ಏನು ಡಿಫೆಕ್ಟ್ಸ ಇದೆ ಎಂಬುದರ ಬಗ್ಗೆ ಮಾಧ್ಯಮಗಳ ಮೂಲಕ ಅದು ಸಾರ್ವಜನಿಕರ ಗಮನಕ್ಕೆ ಹೋಗಬೇಕು; ಹಾಗೂ ದಯವಿಟ್ಟು ಈ ಸಭೆಯ ಗಮನಕ್ಕೆ ತರಬೇಕು.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೇ, ಇವತ್ತು ಮಹಾರಾಷ್ಟ್ರಕ್ಕೆ ಹಾಲು ಹೊರಟರೆ, ಅಲ್ಲಿಯ ಅಧಿಕಾರಿಗಳು, ಕೆಎಂಎಫ್‌ನ ಅಧಿಕಾರಿಗಳು ಸಂಬಂಧಪಟ್ಟಂತಹ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು ಆ ಹಾಲು ಮಹಾರಾಷ್ಟ್ರಕ್ಕೆ ಹೋಗಬಾರದು ಎಂದು ತಡೆಹಿಡಿಯುತ್ತಾರೆ. ಆದರೆ ಇಲ್ಲಿ ನೋಡಿದರೆ, ತಮಿಳುನಾಡಿನಿಂದ ಬೆಂಗಳೂರಿಗೆ ಹಾಲು ಬರುವುದಕ್ಕೆ ಅಲೋ ಮಾಡುತ್ತಾರೆ, ಇದು ಯಾವ ನೀತಿ? ಯಾವುದಾದರೂ ಒಂದನ್ನು ಮಾಡಲಿ, ಬೇಕಾದರೆ ಮಹಾರಾಷ್ಟ್ರಕ್ಕೆ ಹಾಲು ಹೋಗುವುದಕ್ಕೆ ಅಲೋ ಮಾಡಲಿ, ನಮ್ಮ ಜಿಲ್ಲೆಯಲ್ಲಿ ಉತ್ಪಾದನೆಯಾದ ಹಾಲು ಮಹಾರಾಷ್ಟ್ರಕ್ಕೆ ಹೋಗಬೇಕಾದರೆ, ಕೆಎಂಎಫ್‌ನ ಅಧಿಕಾರಿಗಳು ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು, ಬೆಳಗಿನ ಜಾವ 5 ಅಥವಾ 6 ಗಂಟೆಗೆ ಹೋಗಿ ಆ ಹಾಲನ್ನು ತಡೆದು ಅದನ್ನು ತಂದು ಗಟಾರಕ್ಕೆ ಸುರಿಯುತ್ತಾರೆಂದು ನನ್ನ ಗಮನಕ್ಕೆ ಬಂದಿದೆ. ಆದರೆ ತಮಿಳುನಾಡಿನಿಂದ ಬರುವಂತಹ ಹಾಲನ್ನು ನಾವು ತಡೆಯುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಿ. ಈ ರಾಜ್ಯಕ್ಕೆ ಒಂದು ನೀತಿಯು ಇರಬೇಕಲ್ಲವೇ? ಇಲ್ಲಿಂದ ಹೋಗುವ ಹಾಲಿಗೆ ತಡೆಯನ್ನು ಹಾಕುತ್ತೀರಿ. ತಮಿಳುನಾಡಿನಿಂದ ಬರುವ ಹಾಲಿಗೆ ತಡೆಯನ್ನು ಹಾಕುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ?

ಶ್ರೀ ಎ.ಕೃಷ್ಣಪ್ಪ: ಸರ್ಕಾರವು ಅದನ್ನು ತಡೆಯುವುದಕ್ಕೆ ಆಗುವುದಿಲ್ಲವೆಂದು ಹೇಳಲಿಲ್ಲ. ಅದನ್ನು ನಾವು ತಡೆಯುತ್ತೇವೆ, ಆದರೆ ಈಗ ನಮ್ಮ ಗಮನಕ್ಕೆ ಬಂದಿರುವಂತಹ ಲ್ಯಾಬ್ ರಿಪೋರ್ಟ್ಸ್‌ನ್ನು ರೆಡಿ ಮಾಡಿ ಇಟ್ಟುಕೊಂಡಿದ್ದೇವೆ. ಯಾವ ರೀತಿಯಾಗಿ ಕಟ್ಟುನಿಟ್ಟಾದ ಕ್ರಮವನ್ನು ಜಾರಿಗೆ ಕೊಡಬೇಕೆಂದು ಹೇಳಿ ನಾವು ಈಗಾಗಲೇ ಮಾತುಕತೆಯನ್ನು ಮಾಡುತ್ತಿದ್ದೇವೆ.

12-40 ಪಿ.ಎಂ

ಜೊತೆಗೆ ಮಹಾರಾಷ್ಟ್ರಕ್ಕೆ ನಮ್ಮ ಹಾಲು ಹೋಗುತ್ತಿಲ್ಲ ಎಂದು ಹೇಳಬೇಡಿ. ನಮ್ಮ ಹಾಲು ಮಹಾರಾಷ್ಟ್ರಕ್ಕೂ ಹೋಗುತ್ತಿದೆ.

ಶ್ರೀ ಉಮೇಶ್ ವಿ.ಕತ್ತಿ: ನಮ್ಮಿಂದ ಹೋಗುವ ಹಾಲನ್ನು ತಡೆಯುತ್ತಿದ್ದಾರೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಇಡೀ ದೇಶದಲ್ಲಿ ನಮ್ಮ ರಾಜ್ಯ ಹಾಲು ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಇಡೀ ಪ್ರಪಂಚದಲ್ಲಿ ನಮ್ಮ ದೇಶ ಹಾಲಿನ

ಉತ್ಪಾದನೆಯಲ್ಲಿ ಮೊದಲನೇ ಸ್ಥಾನದಲ್ಲಿದೆ. ಈಗ ನಮ್ಮ ದೇಶದಲ್ಲಿ ಪ್ರಿವೆನ್ಷನ್ ಆಫ್ ಫುಡ್ ಅಡಲ್ಟ್ರೇಶನ್ ಆ್ಯಕ್ಟ್ ಎನ್ನತಕ್ಕದ್ದು ಇದೆ. ಹಾಲನ್ನು 'ಫುಡ್' ಎಂದು ಕನ್ಸಿಡರ್ ಮಾಡಿದ್ದೀರಾ ಅಥವಾ ಇಲ್ಲವೆ? ಮತ್ತು ಈ ಆ್ಯಕ್ಟ್‌ನ್ನು ಇಂಪ್ಲಿಮೆಂಟ್ ಮಾಡತಕ್ಕದ್ದು ಯಾರು? ರಾಜ್ಯಸರ್ಕಾರಕ್ಕೆ ಅದರ ಮೇಲೆ ಏನು ಅಧಿಕಾರ ಇದೆ? ಅದರ ಪ್ರಕಾರ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇದನ್ನು ದಯವಿಟ್ಟು ಹೇಳಿ. ಮಾನ್ಯ ಸುರೇಶ್‌ಕುಮಾರ್ ಅವರು ಹೇಳಿದಹಾಗೆ ಇದು ಬಹಳ ವರ್ಷಗಳಿಂದ ಹೊರಗಡೆಯಿಂದ ಹಾಲು ಬರತಕ್ಕದ್ದು ಇದೆ. ಇದು ಹಾಲೇ ಅಲ್ಲ, ಹಾಲಿನ ಬಣ್ಣ ಇರತಕ್ಕದ್ದು ಬೆಂಗಳೂರಿಗೆ ಬರುತ್ತಿದೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ ಫುಡ್ ಅಡಲ್ಟ್ರೇಶನ್ ಆ್ಯಕ್ಟ್ ಪ್ರಕಾರ ಸರ್ಕಾರ ಮನಸ್ಸು ಮಾಡಿದರೆ ಒಂದೇ ದಿವಸಕ್ಕೆ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಈ ಕ್ರಮವನ್ನು ನೀವು ದಯವಿಟ್ಟು ತೆಗೆದುಕೊಳ್ಳುತ್ತೀರಾ?

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ಈ ದೇಶದ ಜನರ ದೃಷ್ಟಿಯಿಂದ, ನಮ್ಮ ರಾಜ್ಯದ ಪ್ರಜೆಗಳ ದೃಷ್ಟಿಯಿಂದ ಸರ್ಕಾರ ಇದಕ್ಕೆ ಬದ್ಧವಾಗಿದೆ. ನಾವು ಏನೇನು ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ತೀರ್ಮಾನವನ್ನು ಮಾಡಿದ್ದೇವೆ. ಅದನ್ನು ಇಲ್ಲಿ ಬಹಿರಂಗವಾಗಿ ಹೇಳುವುದು ಬೇಡ. ಅದು ಸ್ವಲ್ಪ ಕನ್ಸ್ಟ್ರೈಂಟ್ ಆಗುತ್ತದೆ. ನಿಮಗೆ ವೈಯಕ್ತಿಕವಾಗಿ ಬೇಕಾದರೆ ಹೇಳುತ್ತೇನೆ. ಅದಕ್ಕೋಸ್ಕರ ಕ್ರಮ ತೆಗೆದುಕೊಳ್ಳುವುದಕ್ಕೆ ಬದ್ಧತೆಯನ್ನು ನಾವು ಇಟ್ಟುಕೊಂಡಿದ್ದೇವೆ. ಏನು ಕ್ರಮ ತೆಗೆದುಕೊಳ್ಳುತ್ತೇವೆ ಅದನ್ನು ತಿಳಿಸುತ್ತೇನೆ.

ಅಧ್ಯಕ್ಷರು: ದಯವಿಟ್ಟು ನನ್ನದೂ ಒಂದು ಪ್ರಶ್ನೆ ಇದೆ. ಏಕೆಂದರೆ ಇದು ನೇರವಾಗಿ ನನ್ನ ಮತದಾರರಿಗೆ ಅಫೆಕ್ಟ್ ಆಗುವುದರಿಂದ ಹೇಳುತ್ತಿದ್ದೇನೆ. ಒಂದು ಕಡೆ ತಮಿಳುನಾಡಿನಿಂದ ಹಾಲು ತಂದು ಇಲ್ಲಿ ಮಾರುತ್ತಿದ್ದಾರೆ. ಇತ್ತೀಚೆಗೆ ನಮ್ಮ ಮನೆಯಲ್ಲಿ ಕೆ.ಎಂ.ಎಫ್.ನವರು ಎಲ್ಲ ಸೇರಿ ಒಂದು ಮೀಟಿಂಗ್ ಮಾಡಿದಾಗ ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ ಮಂಡ್ಯ ಜಿಲ್ಲೆಯ ಹಾಲೇನಿದೆ ಅದನ್ನು ಬೆಂಗಳೂರಿನಲ್ಲಿ ಮಾರಾಟ ಮಾಡುವುದಕ್ಕೆ ಅದು ಸಾಲುತ್ತಿಲ್ಲ ಕೋಲಾರ ಜಿಲ್ಲೆಯ ಮಿಲ್ಕ್ ಯೂನಿಯನ್ ನಷ್ಟದಲ್ಲಿದೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ತಮಿಳುನಾಡಿನಿಂದ ಒಂದು-ಒಂದೂವರೆ ಲಕ್ಷ ಲೀಟರ್ ಹಾಲನ್ನು ಬೆಂಗಳೂರಿಗೆ ತಂದು ಮಾರುವುದರಿಂದ ಕೋಲಾರ ಬೆಂಗಳೂರು ಅರ್ಬನ್ ಮತ್ತು ರೂರಲ್ ಹಾಗೂ ಮಂಡ್ಯದಲ್ಲಿ ಮಿಲ್ಕ್ ಯೂನಿಯನ್‌ಗೆ ತೊಂದರೆಯಾಗಿದ್ದು ಇದನ್ನು ಬಂದೋಬಸ್ತು ಮಾಡಬೇಕೆಂದು ತಾವು ಒಪ್ಪಿಕೊಂಡಿದ್ದೀರಿ. ಇದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ಶನಿವಾರ ದಿವಸ ಕೋಲಾರ, ಬೆಂಗಳೂರು ಅರ್ಬನ್ ಮತ್ತು ರೂರಲ್ ಮಂಡ್ಯದ ಎಲ್ಲ ಮ್ಯಾನೇಜಿಂಗ್ ಡೈರೆಕ್ಟರ್‌ಗಳು,

ಚೇರ್ಮನ್‌ಗಳನ್ನು ಜೊತೆಯಲ್ಲಿ ಇಟ್ಟುಕೊಂಡು ಮಾತುಕತೆ ನಡೆಸಿದ್ದೇವೆ. ಮುಳಬಾಗಿಲಿನಲ್ಲಿ ಬರುವಂಥಾದ್ದು, ಈ ಕಡೆಗೆ ಹೊಸೂರು ಕಡೆಯಿಂದ ಬರುವಂಥಾದ್ದು, ಚಿಂತಾಮಣಿ ಕಡೆಯಿಂದ ಬರುವಂಥಾದ್ದು, ಬಾರ್ಡರ್ ಡಿಸ್ಟ್ರಿಕ್ಟ್‌ಗಳಿಂದ.....

ಅಧ್ಯಕ್ಷರು: ಆಂಧ್ರ ಪ್ರದೇಶದಿಂದಲೂ ಬರುತ್ತಿದೆ.

ಶ್ರೀ ಎ.ಕೃಷ್ಣಪ್ಪ: ಹಾಗೆ ಬರುವಂಥಾದ್ದನ್ನು ಹೇಗೆ ತಡೆಯಬೇಕೆಂಬ ಬಗ್ಗೆ ನಾವು ಮಾತುಕತೆ ನಡೆಸಿದ್ದೇವೆ. ಅದರ ಬಗ್ಗೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಆದಷ್ಟು ಬೇಗ ತೆಗೆದುಕೊಳ್ಳಿ.

ಶ್ರೀ ಎ.ಕೃಷ್ಣಪ್ಪ: ಆದಷ್ಟು ಬೇಗ ತೆಗದುಕೊಳ್ಳುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಫುಡ್ ಅಡಲ್ಟ್ರೇಶನ್ ಆಕ್ಟ್ ಪ್ರಕಾರ ಕೂಡಲೇ ಕ್ರಮ ತೆಗೆದುಕೊಂಡರೆ ಒಂದು ತೊಟ್ಟು ಹಾಲು ಕೂಡ, ಒಳ್ಳೆಯ ಗುಣಮಟ್ಟವಿಲ್ಲದ ಹಾಲು ಹೊರಗಡೆಯಿಂದ ಬರುವುದನ್ನು ತಡೆಗಟ್ಟಬಹುದು. ಅದು ಬೆಳ್ಳಗೆ ಇರುವಂಥಾದ್ದು ಹಾಲೇ ಅಲ್ಲ ಬೆಳ್ಳಗೆ ಕಾಣತಕ್ಕಂಥ ದ್ರವ ಏನಿದೆ ಅದನ್ನು ತಡೆಯುವುದಕ್ಕೆ ಸಾಧ್ಯವಿದೆ. Prevention of Food Adultertion Act implement ಮಾಡುತ್ತೇವೆ ಎಂದು ಹೇಳಿ. ಲಕ್ಷಾಂತರ ಜನ ರೈತರನ್ನು ಏಕೆ ಹಾಳು ಮಾಡುತ್ತಿದ್ದೀರಿ?

ಶ್ರೀ ಎ.ಕೃಷ್ಣಪ್ಪ: ನಾವು ಹಾಳು ಮಾಡುತ್ತಿಲ್ಲ. ಅದೆಲ್ಲ ನಮ್ಮ ಮುಂದೆ ಹೇಳಬೇಡಿ. ಹಾಳು ಮಾಡುವುದನ್ನು ತಡೆಯಬೇಕೆಂದು ದೃಢ ತೀರ್ಮಾನ ಮಾಡಿರತಕ್ಕಂಥ ಸರ್ಕಾರ ಇದು. ಇದು ನಾವು ಹಾಳು ಮಾಡುತ್ತಿರುವುದು ಅಲ್ಲ. ಐದು ವರ್ಷಗಳ ಕಾಲ ನೀವು ಅಧಿಕಾರದಲ್ಲಿ ಇದ್ದಿರಲ್ಲ ನೀವು ಆಗ ಇದನ್ನು ಮಾಡಬೇಕಿತ್ತು.....

ಶ್ರೀ ಸಿ.ಭೈರೇಗೌಡ: ಕಳೆದ ಐದು ವರ್ಷಗಳ ವಿಚಾರ ಬೇಡ. ಹೊಸದಾಗಿ ನೀವು ಅಧಿಕಾರಕ್ಕೆ ಬಂದಿದ್ದೀರಿ. ಇವತ್ತಿನ ಕಥೆ ಹೇಳಿ. ಐದು ವರ್ಷಗಳ ಹಿಂದಕ್ಕೆ ಏಕೆ ಹೋಗುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು: ನೀವು ಅಧ್ಯಕ್ಷರಿಗೆ ಅಡ್ರೆಸ್ ಮಾಡಿ.

ಶ್ರೀ ಎ.ಕೃಷ್ಣಪ್ಪ: ಈಗ ರಾಜಕೀಯವಾಗಿ ಹೇಳುವುದಾದರೆ.....

ಅಧ್ಯಕ್ಷರು: ಇಲ್ಲಿ ರಾಜಕೀಯವಾಗಿ ವಿಚಾರವೇನೂ ಬೇಕಾಗಿಲ್ಲ. ತ್ಯಕ್ಟುಯಲ್ ಫ್ಯಾಕ್ಟ್ಸ್ ಬಗ್ಗೆ ಹೇಳಿ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ತಮಗೆ ಹೇಳಿದ್ದೇನೆ. ತಮ್ಮ ಮೂಲಕ ಈ ಮನೆಯ ಮಾನ್ಯ ಸದಸ್ಯರುಗಳಿಗೂ ಹೇಳಿದ್ದೇನೆ. ಶನಿವಾರವೇ ಇದರ ಬಗ್ಗೆ ಜರೂರು ಸಭೆ ಮಾಡಿದ್ದೇನೆ. ಇಡೀ ರಾಜ್ಯದಲ್ಲಿರುವ ಎಲ್ಲ ಮಿಲ್ಕ್ ಯೂನಿಯನ್‌ಗಳ ಚೇರ್ಮನ್‌ಗಳು, ಮ್ಯಾನೇಜಿಂಗ್ ಡೈರೆಕ್ಟರುಗಳನ್ನು ಕರೆದು ಚರ್ಚೆ ಮಾಡಿದ್ದೇನೆ; ಯಾವ್ಯಾವ ತಾಲ್ಲೂಕಿನಿಂದ ಬರುವಂಥಾದ್ದು, ಯಾವ್ಯಾವ ಬಾರ್ಡರ್‌ನಿಂದ ಬರುವಂಥಾದ್ದು ಇದೆ, ಇದಕ್ಕೆ ಏನು ಮಾಡಬೇಕೆಂದು ಹೇಳಿ ಕ್ರಮ ತೆಗೆದುಕೊಂಡಿದ್ದೇವೆ. ಅವರ ಅನಿಸಿಕೆ, ಕಳಕಳಿ ಏನಿದೆ ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿದೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ: ಈಗ ಹಾಲು ತಮಿಳುನಾಡಿನಿಂದ ಬರುತ್ತಿದೆ. ಈ ಹಾಲನ್ನು ಪರೀಕ್ಷೆ ಮಾಡಿದ್ದಾರೆ ಮತ್ತು ಅದಕ್ಕೆ ಒಂದು ವರದಿ ಕೂಡ ಬಂದಿದೆ. ಕರ್ನಾಟಕ ರಾಜ್ಯದ ಜನರ ಹಿತದೃಷ್ಟಿಯಿಂದ, ಬೆಂಗಳೂರಿನ ಜನರ ಹಿತದೃಷ್ಟಿಯಿಂದ ಅದೇನು ರಿಪೋರ್ಟ್ ಬಂದಿದೆ ಅದನ್ನು ಇಲ್ಲಿ ಹೇಳಿ. ಏಕೆಂದರೆ ಜನರಿಗೆ ಅದರಿಂದ ಅಪಾಯವಾಗುವುದನ್ನು ತಪ್ಪಿಸಿ. ಮತ್ತೆ ಈ ಕೆ.ಎಂ.ಎಫ್.ಯೂನಿಟ್ ಎಲ್ಲ ಬಂದ್ ಆಗುವ ಸ್ಥಿತಿ ಬಂದಿದೆ. ಈಗ ಮಾನ್ಯ ಅಧ್ಯಕ್ಷರು ಹೇಳಿದಹಾಗೆ ತಮಿಳುನಾಡಿನಿಂದ, ಆಂಧ್ರಪ್ರದೇಶದಿಂದ, ಮಹಾರಾಷ್ಟ್ರದಿಂದ ಸಿಕ್ಕಾಪಟ್ಟೆ ಹಾಲು ಏನು ಬರುತ್ತಿದೆ ಅದನ್ನು ತಪ್ಪಿಸಿ. ನಮ್ಮಲ್ಲಿ ಬೇಕಾದಷ್ಟು ಹಾಲು ಉತ್ಪಾದನೆ ಮಾಡುವುದಕ್ಕೆ ಅವಕಾಶ ಇರುವಾಗ, ಇಂತಹ ಒಂದು ಪ್ರದೇಶದಲ್ಲಿ ನೀವು ಸರಿಯಾಗಿ ಮಾರ್ಕೆಟಿಂಗ್ ಮಾಡುತ್ತಿಲ್ಲ. ನೀವು ಮಿಲ್ಕ್ ಪೌಡರ್ ಸಹಿತ ಹೊರಗೆ ಕಳಿಸುವ ಅವಶ್ಯಕತೆ ಇಲ್ಲ. ಇದನ್ನು ಉಪಯೋಗ ಮಾಡುವುದಕ್ಕೆ ನಮ್ಮ ಕರ್ನಾಟಕದಲ್ಲೇ ಬೇಕಾದಷ್ಟು ಅವಕಾಶ ಇದೆ. ನಮ್ಮಲ್ಲೇ ಬೇಕಾದಷ್ಟು ಉತ್ಪಾದನೆ ಮಾಡಬಹುದು. ಆದರೆ ನೀವು ನಮ್ಮ ರೈತರಿಗೆ ಹಾನಿ ಮಾಡುತ್ತಿದ್ದೀರಿ, ಜನರ ಆರೋಗ್ಯ ದೃಷ್ಟಿಯಿಂದ ಹಾನಿ ಮಾಡುತ್ತಿದ್ದೀರಿ. ಇದರ ಬಗ್ಗೆ ಸರಿಯಾದಂಥ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈಗ ಮಾಡತಕ್ಕಂಥ ಉತ್ಪಾದನೆಯನ್ನು ಇಲ್ಲೇ ಖರ್ಚು ಮಾಡಬಹುದು. ಇಷ್ಟೊಂದು ದುಡ್ಡನ್ನು ಇನ್‌ವೆಸ್ಟ್‌ಮೆಂಟ್ ಮಾಡಿದಂತಹ ಕೆ.ಎಂ.ಎಫ್ ಬಂದ್ ಆಗುವ ಸ್ಥಿತಿಗೆ ತಾವು ತೆಗೆದುಕೊಂಡು ಬಂದಿದ್ದೀರಿ. ಇದರ ಬಗ್ಗೆ ಸರಿಯಾದಂಥ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಮಹಾರಾಷ್ಟ್ರದಿಂದಲೂ ನಮ್ಮ ರಾಜ್ಯಕ್ಕೆ ಸಿಕ್ಕಾಪಟ್ಟೆ ಹಾಲು ಬರುತ್ತಿದೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಸಚಿವರ ಹತ್ತಿರ ಇರುವ ರಿಪೋರ್ಟನ್ನು ದಯವಿಟ್ಟು ಈ ಸಭೆಯ ಮುಂದಿಡಬೇಕು.

ಅಧ್ಯಕ್ಷರು: ಮಾನ್ಯ ಸುಬ್ಬಾರೆಡ್ಡಿಯವರೇ, ನೀವು ಕೇಳಿಬಿಡಿ. ನಿಮ್ಮದೇ ಕೊನೆಯ

ಉಪಪ್ರಶ್ನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ತಮಿಳುನಾಡಿನಿಂದ ಬಂದಂಥ ಹಾಲನ್ನು ಮೂರು ಕಡೆ ಸ್ಯಾಂಪಲ್ಸ್ ತೆಗೆದುಕೊಂಡು ಹಾಲು ಉತ್ಪಾದಕರ ಸಹಕಾರ ಒಕ್ಕೂಟದವರು ಹಾಗೂ ನಾವು ಕ್ವಾಲಿಟಿ ರಿಪೋರ್ಟನ್ನು ಕಲೆಕ್ಟ್ ಮಾಡಿದ್ದೇವೆ. ಈ ಕ್ವಾಲಿಟಿ ರಿಪೋರ್ಟ್ ಏನು ಹೇಳುತ್ತದೆ ಎಂದರೆ, ಮೂರು ಸ್ಯಾಂಪಲ್ಸ್ ತೆಗೆದುಕೊಂಡು ತೋರಿಸಿ ಅವರು ಟೆಸ್ಟ್ ಮಾಡಿ ಈ ರೀತಿಯ ರಿಮಾರ್ಕ್ಸ್‌ಕೊಟ್ಟಿದ್ದಾರೆ -

"All the samples are not conforming to the standards prescribed in the prevention of Food Adulteration Act. Any milk sold without labelling shall contain 6% fat and shall contain minimum 9% solids. not fats. Sample-I found to be adulterated with petroleum and other articles and chemically based jelly which is smelling like kerosene. Hence higher fat being observed in this milk"

ಇಂತಹ ಒಂದು ಹಾಲು ತಮಿಳುನಾಡಿನಿಂದ ಬರುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತಿದ್ದೇನೆ. ಶ್ರೀಮಾನ್ ಕೃಷ್ಣಪ್ಪ ಅವರಿಗೆ ಈ ವರದಿಯನ್ನು ಕೂಡ ಕೊಟ್ಟಿದ್ದಾಯ್ತು. ಅದರ ವರದಿಯನ್ನು ಅವರಿಗೆ ಕೊಟ್ಟಿದ್ದೇನೆ.

ಅಧ್ಯಕ್ಷರು: ತಮ್ಮನ್ನು ಕೇಳಿದರೆ ತಾವು ಕಾರ್ಪೋರೇಷನ್ ಹಲ್ಲ್ ಅಥಾರಿಟೀಸ್ ಮೇಲೆ ಹಾಕಿ ಕೈತೊಳೆದುಕೊಂಡು ಬಿಡುತ್ತೀರಿ. ಅದು ಬೇಡಿ. ನೀವು ಅಸಕ್ತಿ ತೆಗೆದುಕೊಳ್ಳಬೇಕು. ಆದಷ್ಟು ಬೇಗ ಅಲ್ಲಿಂದ ಹಾಲು ಬರುವುದನ್ನು ನಿಲ್ಲಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಇವತ್ತು ಪತ್ರಿಕೆಯಲ್ಲೂ ಸಹ ಬಂದಿದೆ. ಹೆರಿಟೇಜ್ ಮಿಲ್ಕ್ ಏನಿದೆ, ಅದನ್ನು ತಂದು ಇಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ನಮ್ಮ ರೈತರಿಗೆ ತೊಂದರೆಯಾಗುತ್ತದೆ ಮತ್ತು ಕರ್ನಾಟಕ ಮಿಲ್ಕ್ ಫೆಡರೇಶನ್‌ನವರು ಸರ್ಕಾರಕ್ಕೆ ಅಪೀಲ್ ಮಾಡಿದ್ದಾರೆ. ತಮಗೆ ಗೊತ್ತಿರುವ ಹಾಗೆ ಬಹುತೇಕ ನಮ್ಮ ರೈತರಿಗೆ ಹೈನುಗಾರಿಕೆ ಒಂದು ಉಪಕಸುಬಾಗಿದ್ದು ಇದು ಸಂಪೂರ್ಣವಾಗಿ ನಾಶವಾಗತಕ್ಕಂಥ ಸಂಭವ ಇದೆ. ಆದ್ದರಿಂದ ತಕ್ಷಣವೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೇನು?

ಶ್ರೀ ಎ.ಕೃಷ್ಣಪ್ಪ: ಮಾನ್ಯ ಸಭಾಧ್ಯಕ್ಷರೇ, ಆ ಲೂಸ್ ಮಿಲ್ಕ್ ಬರುವ ವಿಚಾರದಲ್ಲಿ ತೊಂದರೆಯಾಗುತ್ತಿದೆ. ಆ ಹೆರಿಟೇಜ್ ಮಿಲ್ಕ್ ವಿಚಾರದಲ್ಲಿ ಮತ್ತು ತಮಿಳುನಾಡಿನ ಈರೋಡಿನಿಂದ ಬರತಕ್ಕಂಥ ಹಾಲಿನ ವಿಚಾರ ನಮ್ಮ ಗಮನಕ್ಕೆ ಈಗಾಗಲೇ ಬಂದು,

ನಾವು ಅದಕ್ಕಾಗಿ ಒಂದು ಪ್ರತ್ಯೇಕವಾದ ಸಭೆಯನ್ನು ಮಾಡಿದ್ದೇವೆ. ತುರ್ತಾಗಿ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ಮಾಡುತ್ತದೆ.

ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ರಾಜ್ಯ ಹೆದ್ದಾರಿಗಳ ರಸ್ತೆಗಳ ಇಕ್ಕೆಲಗಳಲ್ಲಿ ಒತ್ತುವರಿ ಮಾಡಿರುವ ಜಾಗವನ್ನು ತೆರವುಗೊಳಿಸುವ ಬಗ್ಗೆ.

285(2673)

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ಮತ್ತು ರಾಜ್ಯ ಹೆದ್ದಾರಿಗಳ ರಸ್ತೆಯ ಇಕ್ಕೆಲಗಳಲ್ಲಿರುವ ಜಾಗವನ್ನು ವಿವಿಧ ವ್ಯಾಪಾರೋದ್ಯಮಗಳು, ದೇವಸ್ಥಾನಗಳ ಹೆಸರಿನಲ್ಲಿ ಅತಿಕ್ರಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇದರಿಂದ ರಸ್ತೆ ಅಪಘಾತಗಳು ಹೆಚ್ಚಾಗುವುದಿಲ್ಲವೆ;

ಇ) ಈ ರಸ್ತೆಗಳ ಇಕ್ಕೆಲಗಳಲ್ಲಿ ಅತಿಕ್ರಮಿಸಿರುವ ಜಾಗವನ್ನು ತೆರವು ಮಾಡಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಈ) ಹಾಕಿಕೊಂಡಿದ್ದಲ್ಲಿ ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):

ಅ) ರಾಜ್ಯದ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹಲವೆಡೆ ವಾಣಿಜ್ಯೋದ್ಯಮಿಗಳು ಅತಿಕ್ರಮಿಸಿರುವುದು ಮತ್ತು ಕೆಲವೆಡೆ ದೇವಸ್ಥಾನಗಳನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅಪಘಾತ ಹೆಚ್ಚಾಗುವ ಸಂಭವ ಇರುತ್ತದೆ.

ಇ) ರಾಷ್ಟ್ರೀಯ ಹೆದ್ದಾರಿಗಳಿಗೆ ಸಾರ್ವಜನಿಕರಿಂದ ಆಕ್ಷೇಪಣೆ ಪಡೆಯಲು ರಾಷ್ಟ್ರೀಯ ಹೆದ್ದಾರಿ 1956ರ ಕಾಯ್ದೆಯನ್ವಯ ಪ್ರಕಟಣೆ ಹೊರಡಿಸಿದೆ. ಅತಿಕ್ರಮಿಸಿರುವ ಜಾಗವನ್ನು ಗುರುತಿಸಿ ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗುವುದು.

''ಕರ್ನಾಟಕ ಹೈವೇ ಆ್ಯಕ್ಟ್ 1964'' ರ ಸೆಕ್ಷನ್ 7(2)ರಲ್ಲಿ ರಾಜ್ಯ ಹೆದ್ದಾರಿಗಳ ಅಕ್ಕಪಕ್ಕಗಳಲ್ಲಿ ಬರುವ ಆಸ್ತಿಗಳ ವಿವರಗಳನ್ನು ''ರಾಜ್ಯ ಪತ್ರ'' ದಲ್ಲಿ ಪ್ರಕಟಿಸಿ